2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 198/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - | ರಾಜು | ಪಿಡಬ್ಲ್ಯೂ-5 |
| ತಂದೆಯ ಹೆಸರು | - | ಮಲ್ಲೇಗೌಡ | ಸಿಡಬ್ಲ್ಯೂ -7 |
| ವಯಸ್ಸು | - | 45 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಅಣಜೂರು | |

ದಿನಾಂಕಃ 13.01.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಮೃತೆ ಸುಧಾ ನನ್ನ ಅಕ್ಕ. ಆರೋಪಿ ದುಶ್ಯಂತ್ ಮತ್ತು ಪ್ರಾಸಾ.1 ಸಂತೋಷ್ ಗೊತ್ತು, ಅವರು ನನ್ನ ಅಕ್ಕ ಸುಧಾರವರ ಮಕ್ಕಳು. ಚಾಸಾ.6 ನನ್ನ ತಂದೆ. ಪ್ರಾಸಾ.4 ನನ್ನ ಸಂಬಂಧಿ. ಚಾಸಾ.8, ಚಾಸಾ.9 ಮತ್ತು ಚಾಸಾ.10 ರವರು ಗೊತ್ತು.

2. ಮೃತ ಸುಧಾಳಿಗೆ ಇಬ್ಬರು ಮಕ್ಕಳು. ಅವರೆಂದರೆ ಆರೋಪಿ ಮತ್ತು ಪ್ರಾಸಾ.1 ಸಂತೋಷ್. ಸುಧಾರವರ ಗಂಡ ಈಗ್ಗೆ 10 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಸುಧಾ ತನ್ನ ಇಬ್ಬರು ಗಂಡು ಮಕ್ಕಳೊಂದಿಗೆ ಗೌರಿಕಾಲುವೆಯಲ್ಲಿ ಒಂದು ಮನೆಯನ್ನು ಭೋಗ್ಯಕ್ಕೆ ಹಾಕಿಕೊಂಡು ವಾಸವಾಗಿದ್ದರು. ಆರೋಪಿ ದುಶ್ಯಂತ್ ಯಾವುದೇ ಕೆಲಸಕ್ಕೆ ಹೋಗದೇ ಮನೆಯಲ್ಲಿಯೇ ಇರುತ್ತಿದ್ದನು. ಪ್ರಾಸಾ.1 ಬೆಂಗಳೂರಿನ ಯಾವುದೋ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದನು ಮತ್ತು ಕೊರೊನೋದಿಂದಾಗಿ ಆತ ತನ್ನ ತಾಯಿ

ಮತ್ತು ಆರೋಪಿಯೊಂದಿಗೆ ಮನೆಯಲ್ಲಿಯೇ ಇದ್ದುಕೊಂಡು work from home ಮಾಡುತ್ತಿದ್ದನು. ಸುಧಾ ದಿನಸಿ ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು.

3. ದಿನಾಂಕ 23.09.2021 ರಂದು ನಾನು ಅಣಜೂರು ಗ್ರಾಮದಲ್ಲಿರುವ ನಮ್ಮ ಮನೆಯಲ್ಲಿ ಇದ್ದೆನು. ಆಗ ರಾತ್ರಿ 8.30 ಗಂಟೆಗೆ ಪ್ರಾಸಾ.1 ಸಂತೋಷ್ ನನಗೆ ಫೋನ್ ಮಾಡಿ ದುಶ್ಯಂತ್ ನನ್ನ ಅಕ್ಕ ಸುಧಾಳಿಗೆ ಹೊಡೆದು ಸಾಯಿಸಿರುವುದಾಗಿ ತಿಳಿಸಿ ನನಗೆ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಬರುವಂತೆ ಹೇಳಿದನು. ನಂತರ ನಾನು ಮಾರನೇ ದಿನ ಬೆಳಿಗ್ಗೆ 6.00 ಗಂಟೆಗೆ ಮನೆಯಿಂದ ಹೊರಟು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಹೋದೆನು. ಅಲ್ಲಿ ಪೊಲೀಸರು, ಪ್ರಾಸಾ.1 ಮತ್ತು ಇತರರು ಸೇರಿದ್ದರು. ಆಗ ನಾನು ಪ್ರಾಸಾ.1 ರವರನ್ನು ಕುರಿತು ಏನಾಯಿತು ಎಂದು ಕೇಳಿದೆನು. ಆಗ ಆತ ಹಿಂದಿನ ದಿನ ಅಂದರೆ ದಿನಾಂಕ 23.09.2021 ರಂದು ಬೆಳಿಗ್ಗೆ 8.30 ಯಿಂದ 9.00 ಗಂಟೆಗೆ ಆತ, ಅವರಮ್ಮ ಸುಧಾ ಮತ್ತು ಆರೋಪಿ ದೇವಸ್ಥಾನಕ್ಕೆ ಹೋಗಿ ಬೆಳಿಗ್ಗೆ 11.00 ರಿಂದ 11.30 ಗಂಟೆಗೆ ಮನೆಗೆ ವಾಪಾಸ್ಸು ಬಂದಿದ್ದಾಗಿ ನಂತರ ಸಂತೋಷ್ ಪಿ ಜಿ ಯವರೊಬ್ಬರಿಗೆ ಹುಷಾರಿಲ್ಲವೆಂದು ಆಕೆಯನ್ನು ಆಸ್ಪತ್ರೆಯನ್ನು ಕರೆದುಕೊಂಡು ಹೋಗಿದ್ದಾಗಿ, ನಂತರ ಆತ ಮಧ್ಯಾಹ್ನ 2.00 ರಿಂದ 2.30 ಗಂಟೆಗೆ ಮನೆಗೆ ವಾಪಾಸ್ಸು ಬಂದಾಗ ಆರೋಪಿ ಸುಧಾಳನ್ನು ಹೊಡೆದು ಕೊಲೆ ಮಾಡಿರುವುದು ಕಂಡು ಬಂದಿದ್ದಾಗಿ ಆರೋಪಿ ಸುಧಾಳ ಬಳಿ ಹಣವನ್ನು ಕೊಡುವಂತೆ

ಕೇಳಿದಾಗ ಆಕೆ ಹಣವನ್ನು ಕೊಡದಿದ್ದಾಗ ಆಗೋಪಿ ಆಕೆಯನ್ನು ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿದನು. ಆ ರೀತಿ ಆರೋಪಿಯೇ ತನಗೆ ತಿಳಿಸಿದ್ದಾಗಿ ಸಂತೋಷ್ ನನಗೆ ಹೇಳಿದನು.

4. ಸದರಿ ಆಸ್ಪತ್ರೆಯಲ್ಲಿ ನಾನು ನನ್ನ ಅಕ್ಕನ ಶವವನ್ನು ನೋಡಿದ್ದೇನೆ. ನಾನು ನೋಡಿದಾಗ ಆಕೆಯ ಕಿವಿ ಹರಿದು ಹೋಗಿತ್ತು, ಮುಖದ ಮೇಲೆ ಜಜ್ಜಿದ ಗಾಯವಾಗಿತ್ತು, ಆಕೆಯ ತಲೆಯ ಹಿಂಭಾಗದಲ್ಲಿ ಗಾಯವಾಗಿತ್ತು.

5. ಸಾಕ್ಷಿಯು ಈಗಾಗಲೇ ನಿಪಿ.7 ರಿಂದ ನಿಪಿ.10 ಎಂದು ಗುರುತಿಸಲಾಗಿರುವ ಫೋಟೋಗಳನ್ನು ನೋಡಿ ಅವುಗಳ ಪೈಕಿ ನಿಪಿ.7 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅವುಗಳಲ್ಲಿ ನನ್ನ ಅಕ್ಕ ಸುಧಾಳ ಮೃತ ದೇಹ ಮತ್ತು ಆಕೆಯ ದೇಹದಲ್ಲಿ ಮೇಲೆ ನಾನು ಹೇಳಿದಂತೆ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ.

6. ಸದರಿ ಆಸ್ಪತ್ರೆಯಲ್ಲಿ ಬಸವನಹಳ್ಳಿ ಪೊಲೀಸರು ನನ್ನನ್ನು ವಿಚಾರಿಸಿದರು, ಆಗ ನಾನು ನನಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ಕೊಟ್ಟೆನು, ಅದನ್ನು ಅವರು ಬರೆದುಕೊಂಡರು.

<u>ಪಾಟೀ ಸವಾಲುಃ ಶ್ರೀ ಹೆಚ್ ಟಿ ಎಸ್ ಕೆ ವಕೀಲರಿಂದಃ ಆರೋಪಿ ಪರವಾಗಿಃ</u>

7. ಆರೋಪಿ ಮೊದಲಿನಿಂದಲೂ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದನು ಎಂದರೆ ಸರಿಯಲ್ಲ. ನಾನು ವರ್ಷಕ್ಕೆ 2-3 ಬಾರಿ

ನನ್ನ ಅಕ್ಕ ಸುಧಾಳ ಮನೆಗೆ ಹೋಗಿ ಬರುತ್ತಿದ್ದೆನು. ಆರೋಪಿಗೆ ಹುಷಾರಿಲ್ಲದ ಸಮಯದಲ್ಲಿ ನನ್ನ ಅಕ್ಕ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುತ್ತಿದ್ದಳು. ನಾನು ಆರೋಪಿಯೊಂದಿಗೆ ಚೆನ್ನಾಗಿಯೇ ಮಾತನಾಡಿಕೊಂಡು ಇದ್ದೆನು. ನನ್ನ ಅಕ್ಕ ಸುಧಾಳ ಗಂಡ ಅಪಘಾತದಲ್ಲಿ ಮೃತಪಟ್ಟಿದ್ದನು. ಸದರಿ ಅಪಘಾತ ಪ್ರಕರಣದಲ್ಲಿ ಪರಿಹಾರವಾಗಿ 30 ಲಕ್ಷ ರೂಪಾಯಿ ಬಂದಿತ್ತು ಎಂದರೆ ಸಾಕ್ಷಿ ಹಣ ಬಂದಿತ್ತು ಆದರೆ ಎಷ್ಟು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

8. ಫ್ರಾಸಾ.1 ಸಂತೋಷ್ ಊರಿನಲ್ಲಿರುವ ಆಸ್ತಿಯನ್ನು ಮಾರಿ ಬೆಂಗಳೂರಿಗೆ ಹೋಗಿ ನೆಲೆಸುವಂತೆ ತನ್ನ ತಾಯಿಯನ್ನು ಕೇಳುತ್ತಿದ್ದನು ಎಂದರೆ ಸರಿಯಲ್ಲ. ಆದರೆ ಸುಧಾ ಜಮೀನನ್ನು ಮಾರಾಟ ಮಾಡದೇ ಕಷ್ಟಪಟ್ಟು ದುಡಿದು ಮಕ್ಕಳನ್ನು ಸಾಕುತ್ತಿದ್ದಳು ಎಂದರೆ ಸಾಕ್ಷಿ ನಾನು ಸಹ ಅವರ ಕಷ್ಟಕ್ಕೆ ಸಹಾಯ ಮಾಡುತ್ತಿದ್ದೆನು ಮತ್ತು ಅವರಿಗೆ ಜಮೀನನ್ನು ಮಾರಾಟ ಮಾಡುವಷ್ಟು ಕಷ್ಟವಿರಲಿಲ್ಲ ಹಾಗಾಗಿ ಮಾರಾಟ ಮಾಡಿಲ್ಲ ಎನ್ನುತ್ತಾರೆ. ಇಂದಾವರ ಗ್ರಾಮದಲ್ಲಿ ಸುಧಾಳ ಗಂಡನ ಕಡೆಯಿಂದ ಬಂದ ಜಮೀನು ಮತ್ತು ಮನೆ ಇತ್ತು ಎಂದರೆ ಸಾಕ್ಷಿ ಜಮೀನು ಇತ್ತು ಮತ್ತು ಒಂದು ಸಣ್ಣ ಶೀಟು ಮನೆಯನ್ನು ಮಾಡಿಕೊಂಡಿದ್ದರು ಎನ್ನುತ್ತಾರೆ. ಸದರಿ ಮನೆಯಲ್ಲಿ ಸುಧಾ ಮತ್ತು ಅವರ ಮಕ್ಕಳು ಸ್ವಲ್ಪ ದಿನ ವಾಸವಾಗಿದ್ದರು ನಂತರ ಅಲ್ಲಿ ಆಗದಿದ್ದ ಕಾರಣ ಗೌರಿಕಾಲುವೆಯಲ್ಲಿ ಲೀಸ್ ಮನೆಯಲ್ಲಿ ವಾಸವಾಗಿದ್ದರು.

9. ಫ್ರಾಸಾ.1 ರವರು ಇಂದಾವರ ಗ್ರಾಮದಲ್ಲಿ ವಾಸವಿದ್ದ ಸಮಯದಲ್ಲಿ ಅಲ್ಲಿ ಇರಲು ಆಗುವುದಿಲ್ಲ, ಸಿಟಿಗೆ ಹೋಗಬೇಕು ಎಂದು ತನ್ನ ತಾಯಿಯೊಂದಿಗೆ ಗಲಾಟೆ ಮಾಡುತ್ತಿದ್ದನು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಆ ವಿಚಾರಕ್ಕೆ ನಿಮ್ಮ ಅಕ್ಕ ಸುಧಾಳ ಮನೆಯಲ್ಲಿ ಚಿಕ್ಕಪುಟ್ಟ ಗಲಾಟೆಗಳು ಆಗುತ್ತಿದ್ದವು, ಆಗ ನೀವು ಹೋಗಿ ಸಮಾಧಾನ ಪಡಿಸಿ ಬರುತ್ತಿದ್ದಿರಿ ಎಂದರೆ ಸಾಕ್ಷಿ ಆ ವಿಚಾರಕ್ಕೆ ಗಲಾಟೆಯಾಗುತ್ತಿರಲಿಲ್ಲ, ಆದರೆ ಹಣಕಾಸಿನ ವಿಚಾರಕ್ಕೆ ಆಗುತ್ತಿತ್ತು ಎನ್ನುತ್ತಾರೆ.

10. ಸಿ ಡಿ ಎ ರವರು ಮಾಡಿರುವ ಲೇಔಟಿಗೆ ಇಂದಾವರ ಗ್ರಾಮದಲ್ಲಿರುವ ನಿಮ್ಮ ಅಕ್ಕನವರ ಜಮೀನನ್ನು ಕೊಡುವಂತೆ ತೀರ್ಮಾನಿಸಿದ್ದರು ಎಂದರೆ ಸಾಕ್ಷಿ ಆಕೆ ಮತ್ತು ಆಕೆಯ ಗಂಡನ ಅಣ್ಣ ತಮ್ಮಂದಿರು ಸೇರಿ ತೀರ್ಮಾನಿಸಿದ್ದರು ಎನ್ನುತ್ತಾರೆ. ಸದರಿ ಏರಿಯಾದಲ್ಲಿ ಒಂದು ಅಡಿಗೆ 1 ವರೆ ಸಾವಿರ ರೂಪಾಯಿ ಬೆಲೆ ಇದೆ ಎಂದರೆ ಸರಿ. ನನ್ನ ಅಕ್ಕ ಸುಧಾರವರ ಪಾಲಿಗೆ ಬಂದ 2 ಎಕರೆ ಜಮೀನು ಸದರಿ ಗ್ರಾಮದಲ್ಲಿದೆ. ಸದರಿ ಜಮೀನನ್ನು ಸಿ ಡಿ ಎ ರವರಿಗೆ ಕೊಡಲು ನಿಮ್ಮ ಅಕ್ಕ ಸುಧಾ ತಕರಾರು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ವಿಚಾರಕ್ಕೆ ನಿಮ್ಮ ಅಕ್ಕ ಸುಧಾರವರಿಗೂ ಮತ್ತು ಫ್ರಾಸಾ.1 ರವರಿಗೆ ಪದೇ ಪದೇ ಗಲಾಟೆಗಳಾಗುತ್ತಿದ್ದವು ಎಂದರೆ ಸರಿಯಲ್ಲ.

11. ಆರೋಪಿಯನ್ನು ಪದೇ ಪದೇ ಆಸ್ಪತ್ರೆಗೆ ತೋರಿಸಬೇಕಾಗಿದ್ದರಿಂದ ಜಮೀನನ್ನು ಮಾರಾಟ ಮಾಡಲು

ನಿರಾಕರಿಸಿ ಉಳಿಸಿಕೊಳ್ಳುವಂತೆ ನಿಮ್ಮ ಅಕ್ಕ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಯಾವಾಗಲೂ ಒಬ್ಬಂಟಿಯಾಗಿ ಮನೆಯಲ್ಲಿ ಇರುತ್ತಿದ್ದನು ಎಂದರೆ ಸಾಕ್ಷಿ ಆತ ಹೆಚ್ಚಾಗಿ ಯಾರೊಂದಿಗೂ ಮಾತನಾಡುತ್ತಿರಲಿಲ್ಲ ಎನ್ನುತ್ತಾರೆ. ನಿಮ್ಮ ಅಕ್ಕ ಆರೋಪಿಗೆ ಮಾನಸಿಕ ಆರೋಗ್ಯ ಸರಿ ಇಲ್ಲವೆಂದು ಆತನನ್ನು ಎಲ್ಲಿಗೂ ಮತ್ತು ಯಾವುದೇ ಕೆಲಸಕ್ಕೂ ಕಳುಹಿಸದೇ ಮನೆಯಲ್ಲಿಯೇ ಇರಿಸಿಕೊಂಡಿದ್ದಳು ಎಂದರೆ ಸರಿಯಲ್ಲ. ಆರೋಪಿ ಬೇಕರಿಯಲ್ಲಿ ಕೆಲವು ದಿನಗಳು ಮತ್ತು ಹಾರ್ಡ್‌ ವೇರ್ ಅಂಗಡಿಯಲ್ಲಿ ಕೆಲವು ದಿನಗಳು ಕೆಲಸ ಮಾಡಿಕೊಂಡಿದ್ದನು.

**12.** ನಿಮ್ಮ ಅಕ್ಕ ಸುಧಾರವರ ಮನೆಯ ಅಕ್ಕಪಕ್ಕದ ಮನೆಯವರನ್ನು ಸುಧಾರವರ ಸಾವಿನ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿದ್ದೇನೆ, ಆಗ ಅವರು ನಾನು ನೋಡಿದಾಗ ನಿಮ್ಮ ಅಕ್ಕ ಸುಧಾ ಚೆನ್ನಾಗಿಯೇ ಇದ್ದರು ನಂತರ ಘಟನೆಯ ಬಗೆ ತಿಳಿಯಿತು ಎಂದು ತಿಳಿಸಿದರು ಎನ್ನುತ್ತಾರೆ.

13. ಕೇವಲ ಫ್ರಾಸಾ.1 ಸಂತೋಷ್ ರವರು ಹೇಳಿದ್ದನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನನ್ನು ವಿಚಾರಿಸಿದ ಪೊಲೀಸರು ಯಾರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನಿಮ್ಮನ್ನು ವಿಚಾರಿಸಿಲ್ಲ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ವಿಚಾರಿಸಿದ್ದಾರೆ, ಠಾಣೆಯಲ್ಲಿ ವಿಚಾರಿಸಿಲ್ಲ ಎನ್ನುತ್ತಾರೆ. ಆಸ್ಪತ್ರೆಯಲ್ಲಿ ಪೊಲೀಸರು

ಸುಧಾರವರ ತವರುಮನೆಯವರು ಯಾರು ಎಂದು ಕೇಳಿ ಬರೆದುಕೊಂಡರು, ಅದನ್ನು ಹೊರತುಪಡಿಸಿ ಬೇರೆ ಏನು ಬರೆದುಕೊಂಡಿಲ್ಲ.

14. ಯಾವ ಪಿ ಜಿ ಯ ಯಾರಿಗೆ ಹುಷಾರಿರಲಿಲ್ಲ ಮತ್ತು ಅವರನ್ನು ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದು ನೀವು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ನಾನು ಸಂತೋಷನಿಗೆ ನೀನು ಎಲ್ಲಿದ್ದೆ ಎಂದು ಕೇಳಿದಾಗ ಆತ ಆ ರೀತಿ ಹೇಳಿದನು, ನಾನು ಆ ಬಗ್ಗೆ ಹೆಚ್ಚಾಗಿ ವಿಚಾರಿಸಿಲ್ಲ ಎನ್ನುತ್ತಾರೆ.

15. ಮಧ್ಯಾಹ್ನ 2.00 ರಿಂದ 2.30 ಗಂಟೆಗೆ ಮನೆಗೆ ವಾಪಾಸ್ಸು ಬಂದಾಗ ಆರೋಪಿ ಸುಧಾಳನ್ನು ಹೊಡೆದು ಕೊಲೆ ಮಾಡಿರುವುದು ಕಂಡು ಬಂದಿದ್ದಾಗಿ ಸಂತೋಷ್ ನಿಮಗೆ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ನೋಡಿದಾಗ ನಿಮ್ಮ ಅಕ್ಕನ ಕಿವಿ ಹರಿದು ಹೋಗಿತ್ತು, ಮುಖದ ಮೇಲೆ ಜಜ್ಜಿದ ಗಾಯವಾಗಿತ್ತು, ಆಕೆಯ ತಲೆಯ ಹಿಂಭಾಗದಲ್ಲಿ ಗಾಯವಾಗಿತ್ತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

16. ಆರೋಪಿ ಸುಧಾಳ ಬಳಿ ಹಣವನ್ನು ಕೊಡುವಂತೆ ಕೇಳಿದಾಗ ಆಕೆ ಹಣವನ್ನು ಕೊಡದಿದ್ದಾಗ ಆರೋಪಿ ಆಕೆಯನ್ನು ಹೊಡೆದು ಕೊಲೆ ಮಾಡಿರುವುದಾಗಿ ತಿಳಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗೆ ಆರೋಗ್ಯ ಸರಿ ಇಲ್ಲದ ಕಾರಣ ನಿಮ್ಮ ಅಕ್ಕ ಸುಧಾಳಿಗೆ ಆತನ ಮೇಲೆ ಹೆಚ್ಚಿನ ಪ್ರೀತಿ

ಇದ್ದು ಆತನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು ಎಂದರೆ ಸಾಕ್ಷಿ ಹಿರಿಯ ಮಗನಾಗಿದ್ದರಿಂದ ಆತನ ಮೇಲೆ ಹೆಚ್ಚು ಪ್ರೀತಿ ತೋರಿಸುತ್ತಿದ್ದಳು ಎನ್ನುತ್ತಾರೆ. ಸಂತೋಷ್ ಮತ್ತು ನಿಮ್ಮ ಅಕ್ಕ ಸುಧಾರವರ ನಡುವೆ ಹಣಕಾಸಿನ ವಿಚಾರಕ್ಕೆ ಜಗಳಗಳಾಗುತ್ತಿದ್ದವು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮಾನಸಿಕ ಅಸ್ವಸ್ಥನಾಗಿರುವ ಕಾರಣ ಮತ್ತು ಜಮೀನನ್ನು ಎಲ್ಲಾ ತನಗೆ ಸಿಗಲೀ ಎಂದು ಸಂತೋಷ್ ಆರೋಪಿಯ ವಿರುದ್ಧ ಸುಳ್ಳು ಆರೋಪ ಹೊರಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೂ ಸುಧಾರವರ ಸಾವಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.